ಇಷ್ಟು ಒಳ್ಳೆಯ ಬುದ್ಧಿಯನ್ನು ಯಾರು ಕೊಟ್ಟರು ಕಂದ' ಎಂದಳು ಅಳುತ್ತ. ಅಲ್ಲಿಯವರೆಗೆ ಜಡವಾಗಿದ್ದ ನನ್ನ ಕೈಗಳೂ ಕೂಡ ಅಜ್ಜಿಯನ್ನು ಬಾಚಿ ತಬ್ಬಿಕೊಂಡಿದ್ದವು. ಆ ಅಪ್ಪುಗೆಯ ಸುಖ ಕಳೆದ ಹತ್ತು ವರ್ಷಗಳಲ್ಲಿ ನನಗೆ ದಕ್ಕಿರಲಿಲ್ಲ.

ಕೆಲವೇ ದಿನಗಳಲ್ಲಿ ಅಜ್ಜಿ ಹೊರಟುಹೋದರು, ನನ್ನ ಜೀವನಕ್ಕೆ ಹೊಸದಾರಿ ತೋರಿಸಿ.

ನನ್ನ ಊಟ ವಸತಿ, ವಿದ್ಯಾಭ್ಯಾಸ ಎಲ್ಲವೂ ಸರಾಗವಾಗಿ ನಡೆಯುತ್ತಿತ್ತು. ಕೆಲವೇ ವರ್ಷಗಳಲ್ಲಿ ಓದಲು ಬರೆಯಲು ಕಲಿತೆ. ಎಲ್.ಎಸ್. ಪಾಸು ಮಾಡಿದೆ. ಕೊನೆಗೆ, ಅಲ್ಲಿ ನಿರ್ಮಿಸಲಾದ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳುತ್ತ ವಿದ್ಯಾಭ್ಯಾಸವನ್ನೂ ಮುಂದುವರಿಸಿದೆ. ಅದೆಲ್ಲಕ್ಕೂ ದೂರದಿಂದಲೆ ಅಜ್ಜಿಯೇ ವ್ಯವಸ್ಥೆ ಮಾಡಿಸುತ್ತಿರುವ ಬಗ್ಗೆ ಕಾಲಕ್ರಮೇಣ ಅರ್ಥವಾಗತೊಡಗಿತು.

ನನಗೆ ಸುಮಾರು 21 ವರ್ಷವಾದಾಗ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಲೆಹ್‌ಗೆ ಸೇರಿಸಲೂ ವ್ಯವಸ್ಥೆಯಾಯಿತು. ಎಲ್ಲವೂ ಅಜ್ಜಿಯ ಕರುಣೆ. ಬಹುಶಃ ನನ್ನ ಎಲ್ಲ ವಿವರಗಳನ್ನೂ ಪಡೆದುಕೊಂಡು ಬೇಕಾದ ವ್ಯವಸ್ಥೆ ಮಾಡಿಸುತ್ತಿದ್ದಳು. ಆದರೆ ಈ ನಡುವೆ ಒಮ್ಮೆಯೂ ನನ್ನನ್ನು ನೋಡಲು ಬರಲಿಲ್ಲ. ನನಗೂ ಆಕೆಯನ್ನು ಸಂಪರ್ಕಿಸಿ ಮಾತನಾಡುವ ಅವಕಾಶ ಸಿಕ್ಕಿರಲಿಲ್ಲ ಅಥವಾ ಒದಗಿಬರಲಿಲ್ಲ ಅಥವಾ ಆಕೆಯೇ ಬಯಸಿರಲಿಲ್ಲ.

ನಾನು ಶಾಲೆಗೆ ಸೇರಿದ್ದು ತಡವಾಗಿಯಾದರೂ, 25 ವರ್ಷವಾಗುವಷ್ಟರಲ್ಲಿ ಪದವಿ ಪಡೆದೆ ಮತ್ತು ನನ್ನ ದಾಹ್ ಹಳ್ಳಿಯ ಬಳಿ ಅಜ್ಜಿ ಕಟ್ಟಿಸಿದ ಪ್ರೌಢಶಾಲೆಯಲ್ಲಿ ಮಾಸ್ತರಾಗಿ ಪಾಠ ಮಾಡುವ ಅವಕಾಶ ಒದಗಿಬಂತು. ಎಲ್ಲವೂ ನನ್ನ ಅಜ್ಜಿಯ ಕಾಳಜಿಯಿಂದಲೇ ಎಂದು ನಂಬಿದ್ದೆ. ಇದಕ್ಕೆ ಪುರಾವೆಯಾಗಿ, ನಾನು ಮಾಸ್ತರಾಗಿ ಸೇರಿಕೊಂಡ ದಿನವೇ ನನಗೊಂದು ಸಣ್ಣ ಪೆಟ್ಟಿಗೆಯನ್ನು ಕೊಡಲಾಯಿತು. ಅದು ನನ್ನ ಅಜ್ಜಿ ಕಳುಹಿಸಿದ ಪೆಟ್ಟಿಗೆ. ಅದರೊಳಗೊಂದು ಪತ್ರ ಹಾಗೂ ಕೆಲವು ಚಿತ್ರಗಳಿದ್ದವು. ಆ ಪತ್ರ ಟಿಬೆಟಿ ಭಾಷೆಯಲ್ಲಿದ್ದುದರಿಂದ ಅದನ್ನು ಭಾಷಾಂತರಿಸಿ ನಿಮಗೆ ಕಳುಹಿಸುತ್ತಿದ್ದೇನೆ. ಈ ಪತ್ರದಲ್ಲಿನ ವಿವರಗಳು ವೈಯುಕ್ತಿಕವಾಗಿದ್ದರೂ, ಅವುಗಳ ಮೂಲಕ ಆರ್ಯರ ಬಗ್ಗೆ ಹಲವು ಮಜಲುಗಳು ಗೋಚರವಾಗುವುದು ಸತ್ಯ. ನಂತರದ, ಕಳೆದ 25 ವರ್ಷಗಳಲ್ಲಿ ಆ ಪತ್ರದಲ್ಲಿ ನಮೂದಿಸಿದ್ದ ಘಟನೆಗಳ ಬಗೆಗಿನ ಸತ್ಯಾಸತ್ಯತೆಯನ್ನು, ಹೆಚ್ಚಿನ ವಿವರಗಳನ್ನೂ ಹುಡುಕಲು ಪ್ರಯತ್ನಿಸಿದ್ದೇನೆ ಕೂಡ. ಹಾಗಾಗಿ ಹಲವು ಕಡೆ ಸೂಕ್ತವಾದ ಉಲ್ಲೇಖಗಳನ್ನೂ, ನನ್ನದೆ ಟಿಪ್ಪಣಿಗಳನ್ನೂ ಜೋಡಿಸಿದ್ದೇನೆ. ಪತ್ರ ಓದುವ ಮುನ್ನ ನೀವು ಒಂದು ವಿಷಯವನ್ನು ಗಮನಿಸಬೇಕು: ನಮ್ಮ ಅಜ್ಜಿ ತಮ್ಮ ಇಡೀ ಜೀವನವನ್ನು ಚರಿತ್ರೆಯ ಈ ರಹಸ್ಯದ ಸಂಪೂರ್ಣ ಶೋಧನೆಗೆ ಮುಡಿಪಾಗಿಟ್ಟಂತೆ ತೋರುತ್ತದೆ. ಇದು ನನ್ನ ಅಜ್ಜಿಯ ಪತ್ರದ ಒಕ್ಕಣೆ.

"ಪ್ರೀತಿಯ ಕಂದ, ದಿಂಗ್ಸೆ,

ಕಳೆದ ಇಪ್ಪತ್ತು ವರ್ಷಗಳಿಂದ ನಿನ್ನ ವಿದ್ಯಾಭ್ಯಾಸ ಮತ್ತು ಕ್ಷೇಮದ ಬಗ್ಗೆ ತಿಳಿದುಕೊಳ್ಳುತ್ತಿದ್ದೆ. ನಿನ್ನ ಬೆಳವಣಿಗೆಯನ್ನು, ವಿದ್ಯಾಭ್ಯಾಸದಲ್ಲಿ ನಿನ್ನ ವೃದ್ಧಿಯನ್ನು ಕೇಳಿ ಸಂತೋಷಪಡುತ್ತಿದ್ದೆ. ನೀನು ಈವರೆಗೆ ಗಳಿಸಿರುವ ವಿದ್ಯಾಭ್ಯಾಸದಿಂದಾಗಿ ಈ ಪತ್ರವನ್ನು ಓದುವ ಶಕ್ತಿಯನ್ನೂ, ಇಲ್ಲಿ ನಮೂದಿಸಿರುವ ಕೆಲವು ಸಂದಿಗ್ಧತೆಗಳನ್ನು ಅರ್ಥ ಮಾಡಿಕೊಳ್ಳುವ ಅರಿವನ್ನೂ ಪಡೆದಿರುವೆ ಎಂಬ ದೃಢ ನಂಬಿಕೆ ನನಗಿದೆ. ಹಾಗಿದ್ದಲ್ಲಿ ಮಾತ್ರ ನಿನಗೆ ಈ ಪತ್ರ ತಲುಪಿಸುವಂತೆ ನಾನು ವ್ಯವಸ್ಥೆ ಮಾಡಿದ್ದೆ. ಹಾಗಾಗಿ ನೀನು ಇಷ್ಟು ಬೆಳೆದಿರುವುದು ನನ್ನ ಅದೃಷ್ಟ ಎಂದೆ ಭಾವಿಸುತ್ತೇನೆ.